ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ.ಃ 1523/2022

..............................................................................

CW 04
PW 02

ಹೆಸರು ಃ ಶಂಕರ ಗೊಡಿಮನಿ
ತಂದೆಯ ಹೆಸರು ಃ ಅಮೃತ
ವಯಸ್ಸು ಃ 35 ವರ್ಷ
ಉದ್ಯೋಗ ಃ ರೈತಾಪಿ
ವಾಸಸ್ಥಳ ಃ ಕಾಳಗಿನಕೊಪ್ಪಾ , ತಾಃ ಹಳಿಯಾಳ.

ದಿನಾಂಕ 24-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 5 ಪರಿಚಯ ಇದ್ದಾರೆ ಉಳಿದವರ ಪರಿಚಯ ಇಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಮೋಟಾರ ಸೈಕಲಗಳ ಕಳ್ಳತನ ಮಾಡಿದ ಸ್ಥಳಗಳ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಘಟನಾ ಜಾಗದ ಪಂಚನಾಮೆಯನ್ನು **ನಿಪಿ 4 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 4 ಎ ಎಂದು** ಗುರುತಿಸಲಾಯಿತು. ಸದರಿ ಸಹಿಯನ್ನು 4 ವರ್ಷಗಳ ಹಿಂದೆ ಮುಗದ ಕೊಪ್ಪದಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದನ್ನು ಹಳಿಯಾಳದ ಬಸ ನಿಲ್ದಾಣದ ಎದುರಿಗೆ ಇರುವ ಹೊಟೇಲ ಹತ್ತಿರ ತೆಗೆದಿರುತ್ತಾರೆ. ಸದರಿ ಭಾವಚಿತ್ರದಲ್ಲಿ ತಾವು ಆರೋಪಿ ದುರ್ಗಪ್ಪಾ ಮತ್ತು ಇನ್ನೊಬ್ಬರು, ರೇಣಪ್ಪಾ ಮತ್ತು ಪೋಲಿಸರು ಇರುತ್ತೆವೆ ಎನ್ನುತ್ತಾರೆ.ಸದರಿ ಭಾವಚಿತ್ರವನ್ನು **ನಿಪಿ 5** ಎಂದು ಗುರುತಿಸಲಾಯಿತು. ಪೋಲಿಸರು ಭಾವಚಿತ್ರದಲ್ಲಿ ಕಾಣುವ ದುರ್ಗಪ್ಪಾ ಮತ್ತು ಇನ್ನೊಬ್ಬರು ಗಾಡಿ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದರು. ಸ್ಥಳವನ್ನು ದುರ್ಗಪ್ಪಾರವರೇ ತೋರಿಸಿರುತ್ತಾರೆ. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು

ತೋರಿಸಲಾಗಿ ಅದನ್ನು ಕೆ ಇ ಬಿ ಅಳ್ಳೊಳ್ ಹತ್ತಿರ ತೆಗೆದಿರುತ್ತಾರೆ. ಸದರಿ ಭಾವಚಿತ್ರದಲ್ಲಿ ತಾವು ಆರೋಪಿ ದುರ್ಗಪ್ಪಾ ಮತ್ತು ಇನ್ನೊಬ್ಬರು, ರೇಣಪ್ಪಾ ಮತ್ತು ಪೋಲಿಸರು ಇರುತ್ತೆವೆ ಎನ್ನುತ್ತಾರೆ.ಸದರಿ ಭಾವಚಿತ್ರವನ್ನು **ನಿಪಿ 6** ಎಂದು ಗುರುತಿಸಲಾಯಿತು. ಸ್ಥಳವನ್ನು ದುರ್ಗಪ್ಪಾ ರವರೇ ತೋರಿಸಿರುತ್ತಾರೆ. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಅದನ್ನು ಮುಗದ ಕೊಪ್ಪದ ಮಾರುತಿ ರವರ ಮನೆಯ ಹತ್ತಿರ ತೆಗೆಯಲಾಗಿದೆ. ಮಾರುತಿ ರವರ ಮನೆಯ ಹತ್ತಿರ ಮೋಟಾರ ಸೈಕಲ ಕಳ್ಳತನವಾಗಿತ್ತು. ಸದರಿ ಭಾವಚಿತ್ರದಲ್ಲಿ ತಾವು ಆರೋಪಿ ದುರ್ಗಪ್ಪಾ ಮತ್ತು ಇನ್ನೊಬ್ಬರು, ರೇಣಪ್ಪಾ ಮತ್ತು ಪೋಲಿಸರು ಇರುತ್ತೆವೆ ಎನ್ನುತ್ತಾರೆ. ಸದರಿ ಭಾವಚಿತ್ರವನ್ನು **ನಿಪಿ 7** ಎಂದು ಗುರುತಿಸಲಾಯಿತು. ಸ್ಥಳವನ್ನು ದುರ್ಗಪ್ಪಾ ರವರೇ ತೋರಿಸಿರುತ್ತಾರೆ. ಪೋಲಿಸರು ದುರ್ಗಪ್ಪಾ ಮತ್ತು ಇನ್ನೊಬ್ಬರನ್ನು ಕರೆದುಕೊಂಡು ಬಂದಿದ್ದೇವೆ ಅವರೆ ಗಾಡಿಯನ್ನು ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದರು ನಂತರ ನಮ್ಮನ್ನು ಹಳಿಯಾಳದ ಬಸ್ ನಿಲ್ದಾಣದ ಹತ್ತಿರ ಇರುವ ಹೋಟೆಲ್ ಹತ್ತಿರ ಕರೆದುಕೊಂಡು ಬಂದಿರುತ್ತಾರೆ. ಅಗ ಜಾಗವನ್ನು ದುರ್ಗಪ್ಪರವರೇ ತೋರಿಸಿರುತ್ತಾರೆ. ಇನ್ನೊಬ್ಬ ವ್ಯಕ್ತಿ ಇದ್ದರು ಆತನ ಹೆಸರು ಗೊತ್ತಿಲ್ಲ. ಸಾಕ್ಷಿಗೆ ಒಂದು ನೋಟಿಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನೋಟಿಸನ್ನು **ನಿಪಿ 8 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 8 ಎ ಎಂದು** ಗುರುತಿಸಲಾಯಿತು. ಪಂಚನಾಮೆಗೆ ಸಹಿಯನ್ನು 3.30 ರಿಂದ 4.00 ಗಂಟೆಯ ಅವಧಿಯಲ್ಲಿ ಮಾಡಿರುತ್ತೇನೆ. ಆ ದಿನ ಜಾಗ ತೋರಿಸಿದ ದುರ್ಗಪ್ಪ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ. ಇನ್ನೊಬ್ಬ ವ್ಯಕ್ತಿಯನ್ನು ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 27-07-2022 ರಂದು ನಿಮ್ಮನ್ನು ಮತ್ತು ಚಾಸಾ 5 ರವರನ್ನು ಠಾಣೆಗೆ ಕರೆಸಿ ಆರೋಪಿ ದುರ್ಪ್ಪಾ ಮತ್ತು ಸಮೀರವುಲ್ಲಾರವರನ್ನು ತೋರಿಸಿ ಇವರೆ ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿ ನಿಮಗೆ ಅವರು ತೋರಿಸುವ ಸ್ಥಳಗಳಲ್ಲಿ ಪಂಚನಾಮೆ ಮಾಡಲು ಪಂಚರಾಗುವಂತೆ ನಿಮಗೆ ಕೋರಿಕೊಂಡರು ನೀವು ಒಪ್ಪಿದ ಮೇರೆಗೆ ನಿಮ್ಮನ್ನು ಹಳಿಯಾಳದ ಆನಂದ ಸಾಗರ ಹೋಟೆಲ ಹತ್ತಿರ ಆರೋಪಿತನು ತೋರಿಸುವ ಆನಂದ ಸಾಗರ ಹೋಟೆಲ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿನ, ಅಳ್ಳೊಳ್ಳಿ ಕ್ರಾಸ ಹತ್ತಿರ ಮತ್ತು ಮುಗದ ಕೊಪ್ಪದ ಮಾರುತಿ ಮನೆ ಹತ್ತಿರ ನಿಮ್ಮ ಸಮಕ್ಷಮ ಪಂಚನಾಮೆಯನ್ನು 3.30 ರಿಂದ 6.45 ರವರೆಗೆ

ಜರುಗಿಸಿ ನಿಮಗೆ ಓದಿ ಹೇಳಿ ನಿಮ್ಮ ಸಹಿ ಪಡೆದರು ಎಂದರೆ ಸರಿ. ಭಾವಚಿತ್ರದಲ್ಲಿ ಕಾಣುವ ಕೆಂಪು ಬಣ್ಣದ ಅಂಗಿ ಮತ್ತು ಕಪ್ಪು ಬಣ್ಣದ ಪ್ಯಾಂಟ ಧರಿಸಿರುವ ವ್ಯಕ್ತಿ ಇದ್ದರು ಎಂದರೆ ಸರಿ. ಆತನ ಹೆಸರು ಸಮೀರವುಲ್ಲಾ ಎಂದರೆ ಪೋಲಿಸರು ಆತನ ಹೆಸರು ಸಮೀರವುಲ್ಲಾ ಎಂದು ಹೇಳಿದ್ದರು ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಸಮೀರವುಲ್ಲಾ ಆ ದಿನ ನಿಮ್ಮ ಜೊತೆಗೆ ಬಂದಿದ್ದನು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ವಿ ಕೆ ವಕೀಲರಿಂದ

ನಮ್ಮನ್ನು ಆನಂದ ಸಾಗರ ಹೋಟೇಲ ಹತ್ತಿರ, ಅಳ್ನೊಳ್ಳಿ ಕ್ರಾಸ ಹತ್ತಿರ ಮತ್ತು ಮುಗದ ಕೊಪ್ಪಕ್ಕೆ ಪೋಲಿಸರು ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಅಲ್ಲಿ ನಿಮ್ಮನ್ನು ನಿಲ್ಲಿಸಿ ಭಾವಚಿತ್ರ ತೆಗೆದರು ಎಂದರೆ ಸರಿ. . ಸಹಿ ಮಾಡಿರು ದಾಖಲೆಯಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಳ್ಳತನ ಮಾಡಿದವರು ಇವರೆ ಎಂದು ತೋರಿಸಿದರು ಎನ್ನುತ್ತಾರೆ. ದುರ್ಗಪ್ಪಾ ಮತ್ತು ಇನ್ನೊಬ್ಬ ವ್ಯಕ್ತಿಯ ಹೆಸರನ್ನು ಪೋಲಿಸರೆ ನಿಮಗೆ ಹೇಳಿದರು ಎಂದರೆ ಸರಿ. ದುರ್ಗಪ್ಪಾ ಮತ್ತು ಇನ್ನೊಬ್ಬ ವ್ಯಕ್ತಿ ನಿಮಗೆ ಇಲ್ಲಿಂದ ಹೋಗೋಣ ಎಂದು ಕರೆಯಲಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.